# ನನ್ನ ಹಾಗೆಯೆ

ವೃಷಭನಾಥನ ಮಕ್ಕಳಾದ ಭರತ ಮತ್ತು ಬಾಹುಬಲಿ ಇಬ್ಬರ ನಡುವೆ ರಾಜ್ಯಕ್ಕಾಗಿ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಬಾಹುಬಲಿಯು ತನ್ನ ಅಣ್ಣನಾದ ಭರತನನ್ನು ಮುಷ್ಟಿಯುದ್ಧ, ಜಲಯುದ್ಧ ಮತ್ತು ದೃಷ್ಟಿಯುದ್ಧಗಳಲ್ಲಿ ಸೋಲಿಸುತ್ತಾನೆ. ಇದರಿಂದ ಅವಮಾನಿತನಾದ ಭರತನು ಬಾಹುಬಲಿಯನ್ನು ಕೊಲ್ಲಲು ಮುಂದಾಗುತ್ತಾನೆ. ಬೇಸರಗೊಂಡ ಬಾಹುಬಲಿ ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸನ್ನ ಆಚರಿಸಲು ತೆರಳುತ್ತಾನೆ. ಈ ರೀತಿಯಲ್ಲಿ ಭೋಗವನ್ನು ತ್ಯಜಿಸಿ ತ್ಯಾಗಿಯಾಗುವ ಭವ್ಯ ತತ್ವವನ್ನು ಬಾಹುಬಲಿಯು ಜಗತ್ತಿಗೆ ಸಾರುತ್ತಾನೆ. ಸ್ವಾಭಿಮಾನ, ತ್ಯಾಗ ಹಾಗೂ ಅಹಿಂಸೆಯ ಪ್ರತೀಕವಾದ ಗೊಮ್ಮಟ ಮೂರ್ತಿಗೆ ೧೨ ವರ್ಷದಲ್ಲೊಮ್ಮೆ ಮಹಾಮಸ್ತಕಾಭಿಷೇಕ ನಡೆಯುತ್ತದೆ. ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಯ ಮಹಾಮಜ್ಜನವನ್ನು ಕಂಡ ಮಗು ತನ್ನ ತಾತನ ಜೊತೆ ನಡೆಸುವ ಸಂಭಾಷಣೆ ಹಾಗೂ ಮಗುವಿನ ಮುಗ್ಧತೆ ಈ ಕವನದಲ್ಲಿದೆ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

**ಕೃತಿಕಾರರ ಪರಿಚಯ:** ಸು. ರಂ. ಎಕ್ಕುಂಡಿ

**ಪೂರ್ಣ ಹೆಸರು:** ಸುಬ್ಬಣ್ಣ ರಂಗನಾಥ ಎಕ್ಕುಂಡಿ

**ಜನ್ಮಸ್ಥಳ**: ಹಾವೇರಿ ಜಿಲ್ಲೆಯ ರಾಣಿಬೆನ್ನೂರು

**ಜನ್ಮ ದಿನಾಂಕ:** ೨೦ ಜನವರಿ ೧೯೨೩

**ಪ್ರಮುಖ ಕೃತಿಗಳು:** ಆನಂದ ತೀರ್ಥ, ಸಂತಾನ, ಹಾವಾಡಿಗರ ಹುಡುಗ, ಮತ್ಸಗಂಧಿ, ಬೆಳ್ಳಕ್ಕಿಗಳು, ಕಥನ ಕವನಗಳು

**ಪ್ರಶಸ್ತಿಗಳು:** ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ರಾಜ್ಯ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**I. ಪದಗಳ ಅರ್ಥ (Word Meaning)**

ಅಭಯ, ಚೆಂಬು, ದುಗ್ಧಹಾಸ, ನುಡಿಯ ಹೊಳೆ, ನೆರೆ, ಮಜ್ಜನ, ಸ್ನಾನ,

ಮುಗಿಲು, ಎತ್ತರದ ಸ್ಥಾನ, ಮುಕ್ತ, ಹೋರಾಡು, ಹಚ್ಚಡ, ಹಮ್ಮು

**II. ಪ್ರಶ್ನೆಗಳು (Questions)**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. (Fill in the blanks)**

೧. ಬಾಹುಬಲಿಯ ಅಣ್ಣನ ಹೆಸರು ..................

೨. ಬಾಹುಬಲಿ ಮೂರ್ತಿ ಇರುವ ಬೆಟ್ಟದ ಹೆಸರು ................

೩. ಸು. ರಂ. ಎಕ್ಕುಂಡಿಯವರ ...................... ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ದೊರೆತಿದೆ.

FOR KANNADA

೪. ಬಾಹುಬಲಿಯು ಹುಟ್ಟು ಸಾವು ತಿಳಿಯಲು ಕಂಡುಕೊಂಡ ದಾರಿ................

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer the following questions in one sentence)**

೧. ಬಾಹುಬಲಿಯನ್ನು ಕಂಡು ಮಗುವು ಅಜ್ಜನನ್ನು ಏನೆಂದು ಕೇಳಿತು?

೨. ಭರತ ಬಾಹುಬಲಿಯರ ಸೆಣಸಾಟದ ಫಲಿತಾಂಶವೇನು?

೩. ಸೂರ್ಯ ಚಂದ್ರರು ಬಾಹುಬಲಿಗೆ ಏಕೆ ನಮಿಸಿದರು?

೪. ಮಗುವಿನ ಮುಗ್ಧ ನಂಬಿಕೆಗೆ ಗುಮ್ಮಟನ ಪ್ರತಿಕ್ರಿಯೆ ಏನು?

೫. ಬಾಹುಬಲಿ ಮೂರ್ತಿಯು ಮಜ್ಜನದ ಸಂದರ್ಭದಲ್ಲಿ ಹೇಗೆ ಗೋಚರಿಸುತ್ತದೆ ಎಂದು ಕವಿ ವರ್ಣಿಸಿದ್ದಾರೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. (Answer the following questions in three - four sentences)**

೧. ಅಜ್ಜನು ಬಾಹುಬಲಿ ಮತ್ತು ಕೀರ್ತಿಯ ಬಗ್ಗೆ ಮಗುವಿಗೆ ಏನು ಹೇಳಿದನು?

೨. ಬಾಹುಬಲಿಯು ತನ್ನ ಹಾಗೆಯೇ ಎಂದು ಮಗು ಭಾವಿಸುವುದು ಏಕೆ?

೩. ಬಾಹುಬಲಿ ತಪಸ್ಸಿಗೆ ಹೋಗಲು ಕಾರಣವೇನು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (Answer the following questions in eight - ten sentences)**

೧. 'ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೇನು' ಎಂದು ಬಾಹುಬಲಿಯು ಹೇಳಿದ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿರಿ.

೨. 'ನನ್ನ ಹಾಗೆಯೇ' ಕವನದ ಭಾವಾರ್ಥವನ್ನು ಬರೆಯಿರಿ.

**ಉ) ಸಂದರ್ಭದಲ್ಲಿ ವಿವರಿಸಿರಿ. (Explain the context)**

FOR KANNADA

೧. "ಇವನೇ ಬಾಹುಬಲಿ ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೇನು"

೨. "ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಕೆ"

ಕನ್ನಡಕ್ಕಾಗಿ ಇಲ್ಲಿ ಬನ್ನಿ

**III. ಭಾಷಾಭ್ಯಾಸ**

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ. (Write the opposite words)**

| | | |
|---|---|---|
| ದೂರ X | ಸೋಲು x | ಹುಟ್ಟು X |
| ಭಯ X | ಕೀರ್ತಿ X | ಹತ್ತು X |

**ಆ) ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ. (Write Tatsama – Tadbhava for the following)**

| | |
|---|---|
| ಮುಖ | ಮಜ್ಜನ |
| ಮೂರ್ತಿ | ಮುಗಿದ |

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ. (Make your own sentences)**

ಧೀರತನ =

ಮುಗುಳ್ನಗು =

ಮುದ್ದುಮುಖ =

ಮುಗ್ಧ ಮಗುವಿನಂತೆ =

ಹೊಳವಹಾದಿ =

ಹಚ್ಚಡ =

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ. (Split the words and name the sandhi)**

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಯಾವುದುಂಟು =

ಕೇಳಿತೊಂದು =

ಸೂರ್ಯನೊಮ್ಮೆ =

ಸಾವಿನಾಚೆ =

ಭಯವಾಗದೆ =

ಗೊಮ್ಮಟೇಶ =

**ಉ) ಈ ಪದ್ಯದಲ್ಲಿ ಬಳಕೆ ಆಗಿರುವ ಅಂತ್ಯಪ್ರಾಸ ಪದಗಳನ್ನು ಆರಿಸಿ ಬರೆಯಿರಿ. (Write the Rhyming words)**